

ಗಂಡು ಮಗ ನಂತರ ವರ್ಷಾವರ್ತಿ ಹುಟ್ಟಿದ ಇಬ್ಬರು ಹೆಣ್ಣು ಕೂಸುಗಳು. ಒಬ್ಬಳು ಈ ವರ್ಷ ಶಾಲೆಗೆ ಸೇರಿದ್ದರೆ, ಇನ್ನೊಬ್ಬಳು ಅಂಗನವಾಡಿಯಲ್ಲಿ ದ್ಯಾವಕ್ಕ ಕೂಲಿಯಿಂದ ಹಿಂದಿರುಗುವವರೆಗೂ ಆಟವಾಡಿ ಬರುತ್ತಿದ್ದಳು. ದ್ಯಾವಕ್ಕನ ತಾವು ಚಿಕ್ಕದೊಂದು ಗುಡಿಸಲು. ದ್ಯಾವಕ್ಕ ತಾನು ಕೂಲಿ ಹೋಗುತ್ತಿದ್ದ ರಾಮಣ್ಣನ ಕಪಿಲೆಯಲ್ಲಿ ಆತ ಕಟ್ಟಿಕೊಂಡಿದ್ದ ಸಣ್ಣ ಅಳತೆಯ ಸಿಮೆಂಟ್ ಶೀಟಿನ ಮನೆಯನ್ನು ಆಗಾಗ್ಗೆ ಕಣ್ಣು ತಂಬಿಕೊಳ್ಳುತ್ತಿದ್ದಳು. ತಾನೂ ಈ ತರ ಇಟ್ಟಿಗೆ, ಸಿಮೆಂಟ್ ಶೀಟಿನ ಮನೆ ಕಟ್ಟಿಕೊಳ್ಳಬೇಕೆಂಬ ಕನಸು ಅವಳ ತಲೆಯಲ್ಲಿ ಕೂತು ಯಾವಾಗಲೂ ಸಣ್ಣಗೆ ನವೆಯಂತೆ ಕೆರೆಯುತ್ತಲೇ ಇತ್ತು. ಶೀಟಿನ ಮನೆಯನ್ನ ಕಟ್ಟಿಕೊಳ್ಳುವ ಆಸೆ ತನ್ನ ಗಂಡ ಚಿತ್ತಪ್ಪನ ಹತ್ತಿರ ಹೇಳಿದಾಗೆಲ್ಲಾ, ಅವನು ಆಕೆಯ ಮಾತು